ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 907/2019 .

ಪ್ರಾ.ಸಾ.: 3
ಚಾ.ಸಾ.: 4

ಹೆಸರು : ಪಲ್ವಿನ್ ಪೂಣಚ್ಚ
ತಂದೆಯ ಹೆಸರು : ಮೇದಪ್ಪ
ವಯಸ್ಸು : 45 ವರ್ಷ
ಉದ್ಯೋಗ : ವ್ಯವಸಾಯ
ವಿಳಾಸ : ಕುಮಟೂರು .

... ............................................................................................................ ...

ದಿನಾಂಕ 18 ನೇ ಏಪ್ರಿಲ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ಸಾಕ್ಷಿ ತನ್ನ ಸಹಿಯನ್ನು ಮಹಾಜರ್ ನಲ್ಲಿ ಗುರುತಿಸಿದ ವೇಳೆರೆಗೆ ನಿ ಪಿ 2 ಬಿ ಎಂದು ಗುರುತಿಸಲಾಯಿತು. ದಿ. 13.08.2019 ರಂದು ಚಾಸಾ 1 ರವರ ಮನೆಯಲ್ಲಿ ನಿ ಪಿ 2 ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರು ಸ್ಥಳದಿಂದ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ. ನಿ ಪಿ 19 ರಿಂದ 30 ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ : -

ಚಾಸಾ 1 ಮತ್ತು 2 ರವರ ಪರಿಚಯವಿದೆ. ನಮ್ಮ ಚಾಸಾ 1 ರವರು ಊರಿಗೆ ಹೋಗುವಾಗ ಮನೆ ಕಡೆ ನೋಡಿಕೊಳ್ಳುವಂತೆ ಹೇಳಿ ಹೋಗಿದ್ದರು. ನಾನು

ಹೋದಾಗ ಮನೆಯ ಹಿಂದಿನ ಬಾಗಿಲು ತೆರೆದಿತ್ತು. ಸದರಿ ವಿಚಾರವನ್ನು ನಾನು ದೂರವಾಣಿ ಕರೆ ಮಾಡಿ ನಮ್ಮ ಸಾಹುಕಾರರಿಗೆ ತಿಳಿಸಿದೆನು ರಾತ್ರಿ ವೇಳೆಗೆ ನಮ್ಮ ಸಾಹುಕಾರರು ಬಂದರು ಆ ನಂತರ ಮನೆಯ ಒಳಗಡೆ ಹೋಗಿ ನೋಡಿದೆವು. ನಮ್ಮ ಸಾಹುಕಾರರು ಮನೆಯಲ್ಲಿ ವಸ್ತುಗಳು ಕಾಣುತ್ತಿಲ್ಲ ಎಂದು ತಿಳಿಸಿದರು. ಈ ಬಗ್ಗೆ ಚಾಸಾ 1 ರವರು ದೂರು ನೀಡಿದರು. ಆ ನಂತರ ಕಳ್ಳತನ ಮಾಡಿದ್ದು ಎಂದು ಯಾರು ಎಂದು ತಿಳಿಯಿತು. ಅವರನ್ನು ನಾನು ನೋಡಿದ್ದೆ ಅವರ ಹೆಸರು ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿಲ್ಲ.

ಪಾಟೀ ಸವಾಲುಃ ಆರೋಪಿ 1 ಪರ ವಕೀಲರಿಂದ

ನಾನು ಚಾಸಾ 1 ರವರ ಮನೆಯಲ್ಲಿ ಹುಟ್ಟಿನಿಂದ ಇದ್ದೇನೆ ಹಾಗೂ ಅವರು ಹೇಳಿದ ಕೆಲಸಗಳನ್ನು ಮಾಡುತ್ತೇನೆ. ಆ ದಿನ ಮನೆ ಬಾಗಿಲು ಹೇಗೆ ತೆಗೆದುಕೊಂಡು ಯಾರು ತೆಗೆದರು ನನಗೆ ಗೊತ್ತಿಲ್ಲ. ವಸ್ತುಗಳು ಕಾಣುತ್ತಿಲ್ಲ ಎಂಬ ವಿಚಾರ ನಮ್ಮ ಸಾಹುಕಾರರು ಹೇಳಿದ ಮೇಲೆ ನನಗೆ ತಿಳಿಯಿತ್ತು ಆ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ.

<u>ಮರು ವಿಚಾರಣೆ : -</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.